Doc-516
1.12.12

Reg no KRNN 12 - For Influential Publicity - 28-10-76

ಕೃಷಿ ಮಹೋತ್ಸವ ನೆರವೇರಿಸಿ ವಜ್ರಮಹೋತ್ಸವ ನೇರವೇರಿಸಲಿರುವ ಪತ್ರಿಕೆ

# ಸತ್ಯವಾದಿ
# SATYAVADI

60th Diamond Jubilee Year
60 ನೇ ವಜ್ರಮಹೋತ್ಸವ ವರ್ಷ
★ Satyavadi Daily. Mysore 4 ★

ಸ್ಥಾಪಕರು : ಅರಮನೆ ಏರಸ್ಕೇದಾರ್ ಎಂ. ವಿ. ಸುಬ್ಬರಾವ್ - ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

### ಲೈಸೆನ್ಸ್ ಪಡೆಯದ್ದ ವ್ಯವಹಾರ

ದಾವಣಗೆರೆ— ಇಬ್ಬರು ನ್ಯಾಯಬಾಹಿರವಾಗಿ ದಾಸ್ತಾನು ಮಾಡಿದ್ದ ಪಟಾಕಿ ಮುಂತಾವನ್ನು ಪೋಲೀಸರು ವಶಪಡಿಸಿಕೊಂಡು, ಲೈಸೆನ್ಸು ಪಡೆಯದೆ ವ್ಯಾಪಾರ ನಡೆಸುತ್ತಿದ್ದಕ್ಕಾಗಿ ಅವರ ಮೇಲೆ ಕೇಸು ರಿಜಿಸ್ಟರು ಮಾಡಿದರು.

●

### ಅಂತರ ರಾಷ್ಟ್ರೀಯ ಚದುರಂಗ ಪಂಥ

ತ್ರಿಪೋಲಿ — ಅಂತರ ಚದುರಂಗ ಪಂಥವಲ್ಲಿ 33 ದೇಶಗಳು ಭಾಗವಹಿಸುತ್ತಲಿವೆ.

★

### ವಿಮಾನ ಸಿಡಿತದಿಂದ ಮರಣ

ಜೊಗೊಟೊ — ಪ್ರಯಾಣೀಕರ ವಿಮಾನ ಸಿಡಿದು 32 ಮಂದಿ ಮರಣ ಹೊಂದಿದರು

○

### ದಸರಾ ವಸ್ತು ಪ್ರದರ್ಶನ ಡಿಸೆಂಬರ್ ಕಡೆಯ ವರೆಗೆ

ಈ ವರ್ಷ ಡಿಸೆಂಬರ್ 31 ರ ವರೆಗೆ ಮೈಸೂರು ದಸರಾ ಸಾಂಸ್ಕೃತಿಕ ಕೈಗಾರಿಕಾ ವಸ್ತು ಪ್ರದರ್ಶನ ನಡೆಸಲಾಗುವುದೆಂದು ಪ್ರದರ್ಶನದ ಪ್ರಧಾನ ಕಾರ್ಯದರ್ಶಿಗಳು ತಿಳಿಸಿದ್ದಾರೆ.

★

### ವಸ್ತು ಪ್ರದರ್ಶನದಲ್ಲಿ ಪತ್ರಿಕಾ ಸಂಮೇಳನ

ನಿನ್ನೆ ಬೆಳಿಗ್ಗೆ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಕರೆದಿದ್ದ ಪತ್ರಿಕಾ ಸಂಮೇಳನದಲ್ಲಿ ಪ್ರಧಾನ ಕಾರ್ಯದರ್ಶಿಯವರಾದ ಶ್ರೀಗಳಾದ ಡಿ ಜಯದೇವರಾಜ ಅರಸ್ ಮತ್ತು ಬಿ ಪಿ ಲಿಂಗಯ್ಯ ಅವರು ಮಾತನಾಡುತ್ತಾ, ಈ ಪ್ರದರ್ಶನದಲ್ಲಿ ಅಂತರರಾಷ್ಟ್ರೀಯ ಬೇಸಾಯ ಬೀಜಗಳ ವಸ್ತು ಪ್ರದರ್ಶನವನ್ನು ಮುಂದಿನ ತಿಂಗಳು ೧೫ ನೇ ತಾರೀಖಿನಿಂದ ಪ್ರಾರಂಭಿಸಲು ನಿರ್ಧರಿಸಲಾಗಿದ್ದು, 5 ಎಕರೆ ಪ್ರದೇಶವನ್ನು ಈ ಉದ್ದೇಶಕ್ಕಾಗಿಯೇ ಬಿಡಲಾಗುವುದು ಎಂದರು

ಈ ವ್ಯವಸ್ಥೆಯ ಉದ್ಘಾಟನೆಯನ್ನು ಬೇಸಾಯ ಮತ್ತು ನೀರಾವರಿ ಸಹಾಯ ಮಂತ್ರಿ ಶ್ರೀ ಫಕ್ರುದ್ದೀನ್ ಅಲಿ ಅಹಮದ್ ನೆರವೇರಿಸುವರು ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್‌ರವರು ಅಧ್ಯಕ್ಷತೆ ವಹಿಸುವರು ಇಂಥಹ ಪ್ರದರ್ಶನ ರಾಷ್ಟ್ರದ ಈ ಭಾಗದಲ್ಲಿ ನಡೆಯುತ್ತಿರುವುದು ಇದೇ ಮೊದಲು - ಎಂದು ಅವರು ತಿಳಿಸಿದರು.

○

### ಖಾಸಗಿ ಲೇವಾದೇವಿಗೆ ಕೋರ್ಟು ಡಿಕ್ರಿ ಸಿಗುವುದಿಲ್ಲ

ಬೆಂಗಳೂರು — ಕರ್ನಾಟಕ ರಾಜ್ಯಪಾಲರು ಹೊರಡಿಸಿರುವ ಸುಗ್ರೀವಾಜ್ಞೆ ಪ್ರಕಾರ ಲೈಸೆನ್ಸು ಪಡೆಯದ ಖಾಸಗಿ ಲೇವಾದೇವಿಯವರಿಗೆ ಕೋರ್ಟಿನ ಡಿಕ್ರಿ ಸಿಗುವುದಿಲ್ಲ

### ಪ್ರಧಾನರ ಸೂಚನೆ

ನವ ದೆಹಲಿ — ಕೊಳಚೆ ಪ್ರದೇಶದ ನಿರ್ಮೂಲನ ಪೌಂಡಳಿತ ಸಮಸ್ಯೆಯೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಯೋಜನಾ ಸಚಿವಾಲಯದ ಸಂಪರ್ಕ ಸಲಹಾ ಸಮಿತಿಗೆ ತಿಳಿಸಿದರು.

○

### ದೇವಾಲಯಕ್ಕೆ ಭೇಟಿ

ಜಮ್ಮು — ಈ ವರ್ಷದಲ್ಲಿ ಮಾಂಗಳವಾರ ಕಡೆಯ ವರೆಗೆ ವೈಷ್ಣವೊ ದೇವಾಲಯಕ್ಕೆ 5 ಲಕ್ಷ 75 ಸಾವಿರ ಯಾತ್ರಿಕರು ಭೇಟಿಕೊಟ್ಟಿರುವರು. ದೇವಾಲಯ ತಲುಪಲು ದಿನಂಪ್ರತಿ 3 ಸಾವಿರ ಯಾತ್ರಿಕರು 2100 ಮೀಟರು ಎತ್ತರದ ಕರ್ವಶ ಹತ್ತುತ್ತಾರೆ

★

### ಪ್ರಧಾನರ ವಾಗ್ದಾನ

ನವ ದೆಹಲಿ — ಕುಟುಂಬ ಯೋಜನ ಪ್ರಚಾರದಲ್ಲಿ ಅಡ್ಡಿ ಮಾಡುವ ಜನರನ್ನು ದಂಡಿಸಲು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಲೋಕಸಭೆಯಲ್ಲಿ ವಾಗ್ದಾನ ಮಾಡಿದರು

●

### 600 ತಿದ್ದುಪಡಿಗಳು

ನವ ದೆಹಲಿ — ಲೋಕಸಭೆಯಲ್ಲಿ 59 ವಾಕ್ಯದ ರಾಜ್ಯಾಂಗದ 44 ನೇ ತಿದ್ದುಪಡಿ ಮಸೂದೆಗೆ 600 ನೂರು ತಿದ್ದುಪಡಿಗಳು ಬಂದಿವೆ ಇವುಗಳಲ್ಲಿ ಎಷ್ಟು ಮಂಡಿಸಲ್ಪಡುವುವೋ, ಎಷ್ಟು ವಾಪಸು ತೆಗೆದುಕೊಳ್ಳಲಾಗುವುದೋ, ಎಷ್ಟು ತಿರಸ್ಕೃತವಾಗುವುವೋ ಎರಡನೇ ಪಠಣದಲ್ಲಿ ವಾಕ್ಯದಿಂದ ವಾಕ್ಯ ಧರ್ಮಾಲೋಚನೆಯಲ್ಲಿ ಗೊತ್ತಾಗುವುದು.

●

ನವ ದೆಹಲಿ — ಕರ್ನಾಟಕ್ಲೇಷನ ಓರ್ವ 30 ವಯಸ್ಸಿನ ವಾಣಿಜ್ಯೋದ್ಯಮಿ. ನಿರಾಶೆಯಿಂದ 2 ನೇ ಅಂತಸ್ತಿನಿಂದ ಹಾರಿ ಬಿದ್ದು ಸತ್ತನು

### ಖಾಲಿ ಹಂಚಿಕೆ

ಸಿರಸಿ — ವಿಭಾಗಾಧಿಕಾರಿಗಳು ಹದಿನಾರು ಹಾಲು ಕೊಡುವ ಪ್ರಾಣಿಗಳನ್ನು ಚಿಕ್ಕ ರೈತರಿಗೆ ಹಂಚಿದರು ಮತ್ತು 9 ವ್ಯವಸಾಯ ಕಾರ್ಮಿಕರಿಗೆ ರೂ. 2250 ಸಾಲ ಹಂಚಿದರು

★

### ಚಿಕ್ಕೇಗೌಡರ ಹಿತೋಕ್ತಿ

ಹುಬ್ಬಳ್ಳಿ — ತಾಲ್ಲೂಕು ಕಾಂಗ್ರೆಸಿನ ಯುವಕರನ್ನು ಕುರಿತು ಪಶುಸಂಗೋಪನಾ ಮಂತ್ರಿ ಶ್ರೀ ಬಣಕಾರ್‌ರವರು ಮಾಡಿದ ಬಡವರ ಶ್ರೇಯಸ್ಸಿಗಾಗಿ 20 ಅಂಶಗಳ ಕಾರ್ಯಕ್ರಮವನ್ನು ಪೂರ್ತಾ ಜಾರಿ ಮಾಡಲು ತಿಳಿಸಿದರು.

★

### ಪಾರ್ಲಿಮೆಂಟಿಗೆ ಪೂರ್ಣ ಹಕ್ಕು

ನವ ದೆಹಲಿ — ರಾಜ್ಯಾಂಗ ತಿದ್ದುಪಡಿ ಮಾಡಲು ಪಾರ್ಲಿಮೆಂಟಿಗೆ ಪೂರ್ಣ ಹಕ್ಕಿದೆ ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಲೋಕಸಭೆಯಲ್ಲಿ ತಿಳಿಸಿದರ.

○

### ಸಂಸ್ಕೃತ ಸಂಶೋಧನ ಸಂಸ್ಥೆ

ಮೈಸೂರು — ಮೇಲ್ಕೋಟೆಯಲ್ಲಿ ಹದಿನೇಳು ಪದಸ್ಥರ ಸಂಸ್ಕೃತ ಸಂಶೋಧನಾ ಸಂಸ್ಥೆಯನ್ನು ಸರ್ಕಾರ ಸ್ಥಾಪಿಸಿದೆ ಈ ಸಂಸ್ಥೆಯ ಅವಧಿ 10 ವರ್ಷಗಳು.

○

### ಕ್ಯಾನ್ಸರ್ ಆಸ್ಪತ್ರೆ

ಹುಬ್ಬಳ್ಳಿ — ರೂ 50 ಲಕ್ಷದ ಕ್ಯಾನ್ಸರ್ ಆಸ್ಪತ್ರೆ ಸಿದ್ಧವಾಗುತ್ತಿದ್ದು ಮುಂದಿನ ವರ್ಷದ ಮೊದಲಲ್ಲಿ ಕಾರ್ಯ ಆರಂಭಿಸುವಂತಿದೆ

● ಕನ್ನಡ ಸಾಹಿತ್ಯ ಸಂಮೇಳನಕ್ಕೆ ಭವಿಷ್ಯದಲ್ಲಿ ಅಖಿಲ ಭಾರತ ಸ್ವರೂಪ ಕೊಡಲಾಗುವುದು.

ದಿವ್ಯವಾಣಿ

ಕೃಷ್ಟಿ ನೈಸರ್ಗಿಕ ಸಂಪತ್ತು, ವಿಲಾಸ ಕೃತಕ ಬಡತನ. — ಸೋಕ್ರಟಿಸ್

ವಚನಾಮೃತ

ವಿದ್ಯೆಯಂ ಬಹಳ ಕಲಿತಡೇನು,
ಭಕ್ತಿಯಲ್ಲಿ ಶ್ರದ್ಧೆ ಇಲ್ಲದಾತನು ?
ಬುದ್ಧಿಯಲ್ಲಿ ವಿಶೇಷವೆನಿಸಿದಡೇನು,
ವಿನಯದಲ್ಲಿ ಒಡಮನದವನು ?
ಅರ್ಥದಲ್ಲಿ ಅಧಿಕನಾದಡೇನು,
ಕರ್ತೃ ಶಿವನ ನೆನೆಯದವನು ?
ಮದ್ದು ಗುಣಿಕೆಯ ತಿಂದ ಮದೋನ್ಮತ್ತರ
ಎನಗೊಮ್ಮೆ ತೋರದಿರಯ್ಯ ಅಖಂಡೇಶ್ವರ.

— ಜನ್ನಿಖಶಿನಿಯೋಗಿ ( ವಿಶ್ವಕಲ್ಯಾಣ )


ವುಡ್‌ಲಾಂಡ್ಸ್ 22 10 76 ರಿಂದ

ಅವೋಘ 2ನೇ ವಾರ

ಮಾ

ಧರ್ಮೇಂದ್ರ ಹೇಮಮಾಲಿನಿ ಅಭಿನಯ

ಹಿಂದಿ

ಕಲರ್

ಅಪೇರಾ 22 10 76ರಿಂದ

ಒಂದು ಊದಾಪೂ
ಕಣ್ ಸಿಮಿಟ್ಟುಗಿರದು

ಕಮಲಾ ಹಾಸನ್ ಸುಜಾತ ಅಭಿನಯ

ತಮಿಳು ಪ್ರತಿ ದಿನ 3 ಪ್ರದರ್ಶನಗಳು

Contribute Liberally to
the National Defence Fund

Quality Printing Neat Binding

Lakshminarasimha Press

Sivarampet Mysore


"ಸತ್ಯವಾದಿ" ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣ ಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

# ಗೋರಕ್ಷಣ'ಕೆ ನಕಲ ನೆರವು ನೀಡಿ

ಲಿ ರ

ಗೋರಕ್ಷಣೆ, ಪ್ರಾಣಿದಯ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, "ಗೋರಕ್ಷಣ" ವು ತನ್ನ ಬೆಳ್ಳಿ ಹಬ್ಬ ನೆರವೇರಿಸಿರುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, 'ಗೋರಕ್ಷಣ" ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

'ಗೋರಕ್ಷಣ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4


SHAKTI

SUDHA

A Superb Tonic

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ


Edited Printed and Published by Dharmapracharanirata M S Krishna Rao ( Proprietor ) at the Sarvodaya Press Chamarajapuram Mysore 4